ಜೈಲಿನ ಪಾದರಕ್ಷೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಜಿಮ್ ವ್ಯಾಲೆಂಟಿನ್‌ನನ್ನು ಗಾರ್ಡ್ ಬಂದು ಆಫೀಸಿಗೆ ಕರೆದುಕೊಂಡು ಹೋದ. ಅಲ್ಲಿ, ಗವರ್ನರ್ ಸಹಿ ಹಾಕಿದ್ದ ಕ್ಷಮಾಪಣಾ ಪತ್ರವನ್ನು ವಾರ್ಡನ್ ಅವನ ಕೈಗಿತ್ತರು. ಜಿಮ್ಮಿ ಅದನ್ನು ಅಷ್ಟೇನು ಉತ್ಸಾಹದಿಂದ ಸ್ವೀಕರಿಸಲಿಲ್ಲ. ನಾಲ್ಕು ವರ್ಷಗಳ ಸಜೆಯಲ್ಲಿ ಅವನು ಅದಾಗಲೇ ಹತ್ತು ತಿಂಗಳುಗಳನ್ನು ಜೈಲಿನಲ್ಲಿ ಪೂರೈಸಿದ್ದ. ತನಗೆ ಜಾಸ್ತಿ ಎಂದರೆ ಮೂರು ತಿಂಗಳು ಜೈಲಿನಲ್ಲಿ ಕಳೆಯಬೇಕಾಗುವುದೆಂದು ಅವನು ತಿಳಿದಿದ್ದ. ಹೊರಗಡೆಯಿದ್ದ ಸ್ನೇಹಿತರಿಂದಾಗಿ ಇದು ಅಸಾಧ್ಯವೇನಾಗಿರಲಿಲ್ಲ.

'ಜಿಮ್ಮಿ ವ್ಯಾಲೆಂಟಿನ್' ವಾರ್ಡನ್ ಹೇಳತೊಡಗಿದ. 'ನಾಳೆ ಬೆಳಿಗ್ಗೆ ನಿನಗೆ ಇಲ್ಲಿಂದ ಬಿಡುಗಡೆ ಮಾಡಲಾಗುವುದು. ಇನ್ನು ಮುಂದಾದರೂ ಸರಿ ದಾರಿಯಲ್ಲಿ ಬದುಕುವುದನ್ನು ಶುರು ಮಾಡು. ಮೂಲತಃ ನೀನು ಒಳ್ಳೆ ಮನುಷ್ಯನೇ, ಅದರಲ್ಲಿ ಎರಡು ಮಾತಿಲ್ಲ. ಲಾಕರುಗಳಿಗೆ ಕನ್ನ ಹಾಕುವ ದಂಧೆಯನ್ನು ಬಿಟ್ಟು ಬಿಡು.'

'ಸರ್? ನನಗೆ ಹೇಳುತ್ತಿದ್ದೀರಾ?' ಚಕಿತನಾದಂತೆ ನಟಿಸುತ್ತಾ ಜಿಮ್ಮಿ ಕೇಳಿದ. 'ಇದುವರೆಗೆ ನನ್ನ ಜೀವಮಾನದಲ್ಲೇ ಒಂದು ಲಾಕರನ್ನೂ ಬಿಚ್ಚಿಲ್ಲ ಸಾರ್.'

'ಸರಿಯಾಗಿಯೇ ಹೇಳಿದೆ ಜಿಮ್ಮಿ' ನಗೆಯಾಡುತ್ತಾ ಹೇಳಿದರು ವಾರ್ಡನ್. 'ಸ್ಪ್ರಿಂಗ್‌ಫೀಲ್ಡ್‌ನಲ್ಲಿ ನಡೆದ ಘಟನೆಯ ಬಗ್ಗೆ ಏನು ಹೇಳುತ್ತೀಯಾ? ದೊಡ್ಡವರ ಹೆಸರನ್ನು ನೀನು ತೆಗೆಯುವಂತಿರಲಿಲ್ಲ, ಹಾಗಾಗಿ ನೀನು ಸಿಕ್ಕಿಹಾಕಿಕೊಂಡೆ. ಇಲ್ಲ, ನ್ಯಾಯಾಧೀಶರಿಗೆ ನಿನ್ನ ಮೇಲೆ ಹಳೆ ದ್ವೇಷವೇನಾದರೂ ಇತ್ತೆ?'

'ಸರ್, ಮೊದಲಿಗೆ, ನಾನು ಸ್ಪ್ರಿಂಗ್‌ಫೀಲ್ಡ್‌ನಲ್ಲಿ ಇರಲೇ ಇಲ್ಲ!'

'ಇವನನ್ನು ವಾಪಸ್ಸು ಕರೆದುಕೊಂಡು ಹೋಗು ಕ್ರೋನಿ. ಇವನ ಬಟ್ಟೆ ತಯಾರು ಮಾಡಿಡಲು ಹೇಳು. ನಾಳೆ ಬೆಳಿಗ್ಗೆ ಏಳು ಗಂಟೆಗೆ ಇವನನ್ನು ಮತ್ತೆ ಇಲ್ಲಿಗೆ ಕರೆದುಕೊಂಡು ಬಾ. ನಾನು ಹೇಳಿದ್ದನ್ನು ಮತ್ತೊಮ್ಮೆ ಯೋಚಿಸು ಜಿಮ್ಮಿ.' ವಾರ್ಡನ್ ಮತ್ತೊಮ್ಮೆ ಹೇಳಿದರು.

ಮರುದಿನ ಬೆಳಿಗ್ಗೆ ಏಳುಕಾಲು ಗಂಟೆಗೆ ಜಿಮ್ಮಿ ವ್ಯಾಲೆಂಟಿನ್ ವಾರ್ಡನ್‌ನ ಆಫೀಸಿನಲ್ಲಿದ್ದ. ಅವನು ತೊಟ್ಟಿದ್ದ ಸೂಟು ಅಷ್ಟೊಂದು ಫಿಟ್ಟಾಗುತ್ತಿರಲಿಲ್ಲ. ಅವನೇ ಹೊಲಿದಿದ್ದ ದೊರಗು ಶೂಗಳು ಅವನ ಸೂಟಿಗೆ ಹೊಂದುತ್ತಿರಲಿಲ್ಲ.

ಜೈಲಿನ ಗುಮಾಸ್ತ ಅವನಿಗೆ ಒಂದು ರೈಲಿನ ಟಿಕೆಟ್ ಮತ್ತು ಖರ್ಚಿಗೆ ಎಂದು ಐದು ಡಾಲರ್‌ಗಳನ್ನು ಕೊಟ್ಟ. ಈ ಭಿಕ್ಷೆ, ಒಬ್ಬ ಕೈದಿಯು ಮನಪರಿವರ್ತನೆಗೊಂಡು ಒಬ್ಬ ಒಳ್ಳೆಯ ನಾಗರಿಕನಾಗಲು ಸಾಕು ಎಂದು ಘನ ಸರ್ಕಾರ ಭಾವಿಸಿತ್ತು! ವಾರ್ಡನ್ ಅವನಿಗೊಂದು ಸಿಗಾರನ್ನು ಕೊಟ್ಟು ಕೈ ಮಿಲಾಯಿಸಿದರು. 'ಜಿಮ್ಮಿ ವ್ಯಾಲೆಂಟಿನ್, ನಂಬರ್ 9762, ಗವರ್ನರರ ಮಾಫಿ ಶಿಕ್ಷೆಯ ಕಾರಣಕ್ಕಾಗಿ ಬಿಡುಗಡೆ ಹೊಂದುತ್ತಿದ್ದಾನೆ' ಎಂದು ಜೈಲಿನ ಪುಸ್ತಕದಲ್ಲಿ ಬರೆಯಲಾಯಿತು. ಬೆಳಗಿನ ಎಳೆಬಿಸಿಲಿಗೆ ಜಿಮ್ಮಿ ಜೈಲಿನಿಂದ ಹೊರಗೆ ಬಂದ.